ಕೊಟ್ಟರು. 'ಗೋಣಿ ಬಸಪ್ಪ ಡಾಕ್ಟರು ಬರಲಿಲ್ರಿ... ಅವರ ಅವ್ವಾರು ರಾತ್ರಿ ತೀರಿಕೊಂಡರಂತ. 97 ವರ್ಷ ಆಗಿತ್ತಂತ. ಕೊರೊನಾ ಪಾಸಿಟೀವ್ ಬಂದಿತ್ತಂತ. ಡಾಕ್ಟರಿಗೂ ಕೊರೊನಾ ಬಂದಿರಬೌದು. ಇಲ್ಲಿಂದ ಹೋದ ಮ್ಯಾಲ ನಾನೂ ಟೆಸ್ಟ್ ಮಾಡಿಸಿಕೊಳ್ಳಬೇಂತ ಇದೀನ್ರಿ' ಅಂತ ಹೇಳಿದರು.

'ಎಲ್ರಿ ಚೇರ್ಮನ್ನು, ಪಿಡಿಒ? ತೆಪ್ಪಗಳು ಬಂದ್ವಾ? ಅಲ್ಲೀತಂಕ ಹೋಗೋರು ಯಾರು? ಅವರಿಗೆ ಈಜು ಬರುತ್ತಾ ಕೇಳ್ರೀ... ಮೂರ್ಚೆರೋಗ ಇದ್ರ ಅಂತವರನ್ನು ಕಳಸದು ಬ್ಯಾಡ್ರಿ... ಆಮ್ಯಾಲ ಒಂದ್ ಹೋಗಿ ಇನ್ನೊಂದಾದಾತು' ಎನ್ನುತ್ತ ಗಡಿಬಿಡಿ ಮಾಡಿದರು. ಚೇರ್ಮನ್ನರು ಇನ್ನೂ ಬಂದಿಲ್ಲ... 'ಇನ್ನೇನು ಬರಬೌದು' ಅಂತ ಗುಂಪಲ್ಲಿದ್ದವನೊಬ್ಬ ಹೇಳಿದ. ಮಾರ್ಕ್ ಸಾಹೇಬರಿಗೆ ಸಿಟ್ಟು ಬಂತು.

'ಏಯ್ ಯಾರಾದ್ರೂ ಚೇರ್ಮನ್‌ರಿಗೆ ಫೋನ್ ಮಾಡಿ ಬರಕೆ ಹೇಳ್ರಿ... ಇಲ್ಲಾಂದ್ರ. ಅವ್ರ ನಂಬರ್ ಕೊಡ್ರಿ. ನಾನ ಫೋನ ಹಚ್ಚತೀನಿ... ಹೆಣ ಎತ್ತೋದು ಪೊಲೀಸರ ಕೆಲ್ಸ ಅಂತ ಅವ್ರು ತಿಳಕೊಂಡಂಗ ಕಾಣ್ತದ... ಊರ ಮಂದಿ ಸಹಕಾರ ಕೊಡದಿದ್ರ ನಾವ ಎಲ್ಲಾ ಮಾಡೂಕಾಗೂದಿಲ್ಲ. ನಾ ತಾಸೀಲ್ದಾರ್ ಸಾಹೇಬಂಗ ಝುಳ ಝುಳ ಹೇಳೇ ಹೋಗತೀನಿ...' ಅಂತ ಸಿಟ್ಟಿನಿಂದ ಹೇಳಿದರು.

ಏರಿಯ ಮೇಲೆ ನಿಂತಿದ್ದ ಜನ, ಮುಖ ಕೆಂಪಗೆ ಮಾಡಿಕೊಂಡಿದ್ದ ಮಾರ್ಕ್ ಸಾಹೇಬರನ್ನೂ, ಹಾವೇರಿ ಕಡೆಯ ಅವರ ಜವಾರಿ ಮಾತುಗಳನ್ನು ಕೇಳುತ್ತ ಒಳಗೊಳಗೇ ಖುಷಿ ಪಟ್ಟರು. ಕೆಲವರಿಗೆ ಮುಂದೇನಾಗುತ್ತದೊ ಅನ್ನುವ ಭಯ. ಏರಿಯ ಮೇಲೆ ನಿಂತಿರುವ ಜನ ತಮ್ಮನ್ನು ನೋಡಿ ಗೇಲಿ ಮಾಡಿಕೊಂಡು ನಗುತ್ತಿರಬಹುದೇ ಅಂತ ಮಾರ್ಕ್ ಸಾಹೇಬರಿಗೆ ಅನ್ನಿಸಿತು.

ಚೇರ್ಮನ್ನರ ಫೋನು ಐದಾರು ಸಲ ರಿಂಗ್ ಆಯಿತು. ಅವರು ಎತ್ತಲಿಲ್ಲ. ಈ ಸಿಐ ಸಾಹೇಬ, ಊರಿನ ಪ್ರಥಮ ಪ್ರಜೆಯಾದ ತಮ್ಮನ್ನು ತನ್ನ ಜೀಪಿನಲ್ಲಿ ಕರೆದುಕೊಂಡು ಹೋಗದೆ ಅವಮಾನ ಮಾಡಿದ ಅಂತ ಅವರಿಗೆ ಸಿಟ್ಟು ಬಂದಿತ್ತು.

'ಅರ್ಧ ತಾಸಿನೊಳಗ ಚೇರ್ಮನ್ನರು, ಪಿಡಿಒ ಇಲ್ಲಿಗೆ ಬಂದ್ರ ಸರಿ. ಇಲ್ಲಾಂದ್ರ ಊರವರು ಸಹಕಾರ ಕೊಡ್ತ ಇಲ್ಲಾ... ಅಂತ ತಹಸೀಲ್ದಾರ್ರಿಗೆ, ಎಸ್‌ಪಿ ಸಾಹೇಬರಿಗೆ ರಿಪೋರ್ಟ್ ಮಾಡಿ, ನಾ ಹೊಳ್ಳಿ ಹೋಗ್ತೀನಿ...' ಅಂತ ಸುತ್ತ ನಿಂತವರಿಗೆ ಕೇಳಿಸುವಂತೆ ಜೋರಾಗಿ ಹೇಳಿದ ಮಾರ್ಕ್ ಸಾಹೇಬರು ಧಡ ಧಡ ನಡೆಯುತ್ತ ಹೋಗಿ ಹತ್ತಿರದಲ್ಲಿ ನಿಂತಿದ್ದ ಜೀಪ್ ಹತ್ತಿಕೂತರು. ನಂತರ ಜೀಪು ಅಲ್ಲಿಂದ ಸುಮಾರು ನೂರು ಮೀಟರು ದೂರದಲ್ಲಿದ್ದ ಇದ್ದ ಜುವ್ವೆ ಮರದ ಕೆಳಗೆ ಹೋಗಿ ನಿಂತುಬಿಟ್ಟಿತು.

ಗುಂಪಲ್ಲಿದ್ದವರಲ್ಲಿ ಯಾರೊ ಚೇರ್ಮನ್ನರಿಗೆ ಫೋನ್ ಮಾಡಿದರು. ಸರ್ಕಲ್ ಸಾಹೇಬರು ಸಿಟ್ಟು ಮಾಡಿಕೊಂಡು ಜೀಪಲ್ಲೇ ಕೂತಿರುವ ಸುದ್ದಿ ಮುಟ್ಟಿಸಿದರು. ನೀವು ಬರದಿದ್ದರೆ ಅವರು ಸ್ಟೇಷನ್ನಿಗೆ ಹೋಗಿಬಿಡಬೌದು ಅಂತಲೂ ಹೇಳಿದರು.

ಹನ್ನೆರಡು ಗಂಟೆ ಹೊತ್ತಿಗೆ ಚೇರ್ಮನ್ನರ ಸವಾರಿ ಆಗಮಿಸಿತು. ಬಂದವರೇ ಮಾರ್ಕ್ ಸಾಹೇಬರ ಹತ್ತಿರ ಹೋಗಿ ನನ್ನ ಜೀಪು ಕೆಟ್ಟಿತ್ತು. ಸರಿ ಮಾಡಿಸಿಕೊಂಡು ಬರೋದರೊಳಗೆ ಇಷ್ಟೊತ್ತಾಯ್ತು ಅಂತ ಕಾರಣ ಹೇಳಿ ಕ್ಷಮೆ ಕೋರಿದರು.

'ತುಂಬಿದ ಕೆರೆಯಲ್ಲಿ ಈಜುವ ಧೈರ್ಯ ಇರೋರು ನಮ್ಮೂರಲ್ಲಿ ಯಾರೂ ಇಲ್ಲ. ತೆಪ್ಪದಲ್ಲಿ ಹೋಗಿ ಹೆಣಗಳಿಗೆ ಹಗ್ಗ ಕಟ್ಟಿ ಎಳಕಂಡು ಬರೋಕೆ ಯಾರೂ ಒಪ್ತ ಇಲ್ಲ... ಏನು ಮಾಡೋಣ...' ಅಂತ ತಮ್ಮ ಅಸಹಾಯಕತೆಯನ್ನು ವಿನಯವಾಗಿ ಹೇಳುತ್ತಲೇ, 'ನೀವೇ ಏನಾದ್ರೂ ಮಾಡಿ ಸಾಹೇಬರೇ' ಅನ್ನುತ್ತ ಮತ್ತೊಮ್ಮೆ ಕೈಮುಗಿದು ವಿನಂತಿ ಮಾಡಿಕೊಂಡರು.

ಇಬ್ಬರ ನಡುವೆ ಇಪ್ಪತ್ತು ನಿಮಿಷ ಮಾತುಕತೆ ನಡೆಯಿತು. 'ಬ್ಯಾರೆ ಧರ್ಮದೋರು, ಎಸ್‌ಸಿಗಳು ಕೆರೀ ಒಳಗ ಇಳಿಯಂಗಿಲ್ಲ ಅಂತೀರಿ... ಹಿಂಗಾದ್ರ ಹೆಂಗ್ರಿ? ಈ ಮಂದೀನ ಹೊರಗಿಟ್ಟು ಊರಾಗ ಹೆಂಗರೆ ಬಾಳ್ವೆ ಮಾಡತೀರ್ರಿ' ಅಂತ ಮಾರ್ಕ್ ಸಾಹೇಬರು ಬೇಸರದಲ್ಲೇ ಕೇಳಿದರು. ಅಷ್ಟರಲ್ಲೇ